ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 34-39
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ತೇಜಸ್ವಿಯವರ ಸಾಹಿತ್ಯ : ಅಧ್ಯಯನದ ಹೊಸ ಸಾಧ್ಯತೆಗಳು

**ಉಂಡಾಡಿ ಸಂತೋಷ**
ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾಶ್ಚಾಪೂರ
ಹುಕ್ಕೇರಿ ತಾಲೂಕು, ಬೆಳಗಾವಿ ಜಿಲ್ಲೆ

***Abstract:***
*ಇಂದು ಪರಿಸರದ ಸಮಸ್ಯೆಗಳು ವಿಶ್ವ, ದೇಶ, ಪ್ರಾದೇಶಿಕ, ಸ್ಥಳೀಯವಾರು ಅನನ್ಯವಾಗಿವೆ. ಅವುಗಳಿಗೆ ನಾನಾ ರೀತಿಯ ಪರಿಹಾರ ಮಾರ್ಗಗಳನ್ನು ಹಲವಾರು ರೀತಿಯಲ್ಲಿ, ನಾನಾ ಚಿಂತಕರು ಸೂಚಿಸುತ್ತಾ, ಆ ದಾರಿಯಲ್ಲಿ ಮುನ್ನಡೆಯುತ್ತಾ ಬರುತ್ತಿದ್ದಾರೆ. ಆದರೂ ದಿನನಿತ್ಯವೂ ಪ್ರಕೃತಿಯ ಸಮಸ್ಯೆಗಳು ಉಲ್ಬಣವಾಗುತ್ತಲೆ ಬರುತ್ತಿವೆ. ಆಧುನಿಕ ವಿಜ್ಞಾನ, ತಂತ್ರಜ್ಞಾನಗಳು ಏನೆಲ್ಲಾ ಸಾಧಿಸಿದರು ಪ್ರಾಕೃತಿಕ ಪರಿಸರದ ಸಮಸ್ಯೆಗಳಿಗೆ ಯಾರೂ, ಯಾವ ದೇಶವೂ ಸರಿಯಾದ ಪರಿಹಾರ ಮಾರ್ಗಗಳನ್ನು ಕಂಡುಕೊಂಡಂತೆ ಕಾಣುತ್ತಿಲ್ಲ. ದೂರದೃಷ್ಟಿಯ ಕಾರ್ಯಯೋಜನೆಗಳನ್ನು ಕೈಗೆತ್ತಿಕೊಂಡಿಲ್ಲ. ಈ ಹಿನ್ನೆಲೆಯಲ್ಲಿ ಪೂರ್ಣಚಂದ್ರ ತೇಜಸ್ವಿಯವರ ಸಾಹಿತ್ಯದಲ್ಲಿ ಇವತ್ತಿನ ಪ್ರಾಕೃತಿಕ ಮತ್ತು ಸಾಮಾಜಿಕ ಪರಿಸರದ ಸಮಸ್ಯೆಗಳಿಗೆ ಮಾರ್ಗೋಪಾಯಗಳನ್ನು ಕಂಡುಕೊಳ್ಳುವ ಕಿರುಪ್ರಯತ್ನ ಮಾಡಲಾಗಿದೆ.*

***Keywords:*** *ಕನ್ನಡ ಸಾಹಿತ್ಯ, ಪರಿಸರ, ಜೀವವೈವಿಧ್ಯತೆ, ಪೂರ್ಣಚಂದ್ರ ತೇಜಸ್ವಿ, ಪರಿಸರದ ಕಥೆ, ಕಾಡು ಮತ್ತು ಕ್ರೌರ್ಯ, ಚಿದಂಬರ ರಹಸ್ಯ.*

## ಪೀಠಿಕೆ

ತೇಜಸ್ವಿಯವರ ಸಾಹಿತ್ಯವನ್ನು ಅಧ್ಯ ಯನಕ್ಕೆ ಒಳಪಡಿಸಿ, ಪ್ರಕೃತಿಯೊಂದಿಗೆ ಜೀವಿಗಳ ಸಂಬಂಧದ ಮಹತ್ವ, ಅವುಗಳ ಪರಿಣಾಮಗಳನ್ನು ಕುರಿತು ಪರಿಶೋಧಿಸಿ, ಉತ್ತರಗಳನ್ನು ಕಂಡುಕೊಂಡು ಇಂದಿನ ಪ್ರಾಕೃತಿಕ ಪರಿಸರದ ಹಲವಾರು ಸಮಸ್ಯೆಗಳಿಗೆ ಪರಿಹಾರ ಮಾರ್ಗಗಳನ್ನು ಹುಡುಕಬಹುದು. ತೇಜಸ್ವಿಯವರ ಸಾಹಿತ್ಯದಲ್ಲಿ ಸಮುದಾಯ ಪ್ರಜ್ಞೆಯು ಎದ್ದು ಕಾಣುತ್ತದೆ. ಅವರ ವ್ಯಕ್ತಿತ್ವದಂತೆ ಅವರ ಸಾಹಿತ್ಯವು ಹಲವು ಮಗ್ಗಲುಗಳನ್ನು ಒಳಗೊಂಡಿದೆ. ಅವರ ಸಾಹಿತ್ಯದ ಮೂಲಧಾತುಜನರ ಸಮಷ್ಟಿ ಪ್ರಜ್ಞೆಯನ್ನು ಕೇಂದ್ರವಾಗಿ ಹೊಂದಿದೆ. ಅವರ ಕೃತಿಗಳು ಸಮುದಾಯದ ಸಮಷ್ಟಿ ಪ್ರಜ್ಞೆಯನ್ನು ಸರಳವಾಗಿ ವಿವರಿಸುವುದರ ಮೂಲಕ ಹೊಸ ಒಳನೋಟಗಳನ್ನು ಜನರಿಗೆ ತಲುಪಿಸುವಲ್ಲಿ ಸದಾ ಯಶಸ್ವಿಯಾಗಿವೆ. ತೇಜಸ್ವಿ ಒಬ್ಬ ಬರಹಗಾರರಾಗಿ ಮಾತ್ರವಲ್ಲದೆ ಪ್ರಯೋಗಶೀಲ ಕೃಷಿಕರಾಗಿ, ಛಾಯಾಗ್ರಾಹಕರಾಗಿ, ಕುತೂಹಲಿ ವ್ಯಕ್ತಿಯಾಗಿ, ಅನ್ವೇಷಕರಾಗಿ, ರೈತಪರ ಚಳುವಳಿಗಾರರಾಗಿ, ಪರಿಸರಚಿಂತಕರಾಗಿ, ರಾಜಕೀಯ ವಿಶ್ಲೇಷಕರಾಗಿ ಅಷ್ಟೇ ಅಲ್ಲದೆ ಅವರೊಬ್ಬ ಬೇಟೆಗಾರರಾಗಿರುವ ಕಾರಣ ಅವರ ಸಾಹಿತ್ಯ ಮತ್ತು ಚಿಂತನೆಗಳ ಹಿನ್ನೆಲೆಯಲ್ಲಿ ಪ್ರಕೃತಿಯೊಂದಿಗೆ ಜೀವಿಗಳ

***Please cite this article as:*** ಉಂಡಾಡಿ ಸಂತೋಷ. (2024). ತೇಜಸ್ವಿಯವರ ಸಾಹಿತ್ಯ: ಅಧ್ಯಯನದ ಹೊಸ ಸಾಧ್ಯತೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(3), 34–39

ಸಂಬಂಧವನ್ನು ಕಟ್ಟಿಕೊಡುವುದು, ವಿಶ್ಲೇಷಿಸುವುದು ಬಹಳ ಮುಖ್ಯವೆನಿಸುತ್ತದೆ. ತೇಜಸ್ವಿಯವರ ಸಾಹಿತ್ಯವು ಬಹುಮುಖಿ ಆಯಾಮಗಳನ್ನು ಒಳಗೊಂಡಿರುವ ಕಾರಣ ಅವರ ಸಾಹಿತ್ಯವನ್ನು ಬಹುಶಿಸ್ತೀಯ ಮಾದರಿಯಲ್ಲಿ ಅಧ್ಯಯನಕ್ಕೆ ಒಳಪಡಿಸುವುದು ಮುಖ್ಯವಾಗಿದೆ.

ತೇಜಸ್ವಿಯವರು ಮೂಡಿಗೆರೆಯ 'ನಿರುತ್ತರ' ದಲ್ಲಿ ನೆಲೆ ನಿಂತು ಗ್ರಾಮೀಣ ಬದುಕಿನ ಸ್ಥಿತ್ಯಂತರಗಳ ಹಿನ್ನೆಲೆಯಲ್ಲಿ ಜಗತ್ತನ್ನು ಅರಿಯುವ ಪ್ರಯತ್ನ ಮಾಡಿದರು ಹಾಗೂ ಜಗತ್ತಿನ ಆಗುಹೋಗುಗಳಿಗೆ ಪ್ರತಿಸ್ಪಂದಿಸುತ್ತ ಉತ್ತರಗಳನ್ನು ಹುಡುಕಿದರು. ಪ್ರಕೃತಿಯ ಮಡಿಲಲ್ಲಿ ನೆಲೆನಿಂತು ಪ್ರಕೃತಿ ಮತ್ತು ಜೀವಿ ಸಂಬಂಧಗಳ ಕುರಿತು, ಒಟ್ಟಾರೆ ಪ್ರಕೃತಿಯ ಕುರಿತು ತಮ್ಮ ಗ್ರಹಿಕೆಗಳನ್ನು ವಿಸ್ತರಿಸಿಕೊಳ್ಳುವುದರ ಜೊತೆಗೆ ತಮ್ಮ ಒಳನೋಟಗಳನ್ನು ಸಾಹಿತ್ಯದ ಮೂಲಕ ಜಗತ್ತಿನ ಎದುರು ಆಕರ್ಷಕವಾಗಿ, ಸ್ಪಷ್ಟವಾಗಿ ಮಂಡಿಸಿದರು. ತೇಜಸ್ವಿಯವರ ಪರಿಸರಕ್ಕೆ ಸಂಬಂಧಿಸಿದ ಕೃತಿಗಳ ಹಿನ್ನೆಲೆಯಲ್ಲಿ, ಪರಿಸರ ವ್ಯವಸ್ಥೆಯ ಸಂಕೀರ್ಣತೆಯನ್ನು ಮತ್ತು ಜಟಿಲ ಸಮಸ್ಯೆಗಳನ್ನು ಅರಿತು ಅವುಗಳಿಗೆ ಸಮಾಧಾನಕರ ಪರಿಹಾರ ಮಾರ್ಗಗಳನ್ನು ಹುಡುಕಬಹುದು. ತೇಜಸ್ವಿಯವರ 'ಪರಿಸರದ ಕಥೆ', 'ಕರ್ವಾಲೊ', 'ಚಿದಂಬರ ರಹಸ್ಯ', 'ಮಾಯಾಲೋಕ', 'ಸ್ವರೂಪ', 'ಕಾಡು ಮತ್ತು ಕ್ರೌರ್ಯ' ಹೀಗೆ ಹಲವು ಕೃತಿಗಳ ಹಿನ್ನೆಲೆಯಲ್ಲಿ 'ಪ್ರಕೃತಿಯೊಂದಿಗೆ ಜೀವಿಗಳ ಸಂಬಂಧ' ವನ್ನು ವಿಶ್ಲೇಷಣೆಗೆ ಒಳಪಡಿಸಿ, ಸಂಬಂಧಗಳ ಸ್ವರೂಪದಲ್ಲಿ ಆಗಿರುವ ಪಲ್ಲಟಗಳನ್ನು, ಅದರ ಪರಿಣಾಮಗಳನ್ನು ಹಾಗೂ ಅವುಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಬಹುದು.

"ಜೀವಿಗಳೆರಡರ ನಡುವಿನ ಪರಸ್ಪರ ಅವಲಂಬನೆ ಉಭಯ ಜೀವಿಗಳ ಸುಗಮ ಬದುಕಿಗೆ ಸಹಕಾರಿ. ಇದನ್ನು ಜೀವ ವಿಜ್ಞಾನದಲ್ಲಿ "ಸಹ ಜೀವನ ಸಂಬಂಧ" (Symbiotic relationship) ಎಂಬ ಪರಿಭಾಷೆಯಿಂದ ವರ್ಣಿಸಲಾಗುತ್ತದೆ. ಈ ಸಹಜೀವನ ಮನುಷ್ಯ ಸ್ವಭಾವಕ್ಕೆ ಅನೇಕ ಬಾರಿ ಅಚ್ಚರಿಯಾಗಿ ಕಾಣುತ್ತದೆ. ಆದರೆ ನಿಸರ್ಗದಲ್ಲಿ ಇದು ಸಹಜ ವ್ಯಾಪಾರ, ಸ್ವಭಾವಸಿದ್ಧ ನಿಯಮ."[1] ತೇಜಸ್ವಿಯವರ ಸಾಹಿತ್ಯದ ಹಿನ್ನೆಲೆಯಲ್ಲಿ ಜೀವಿಗಳ ನಡುವಿನ ಪರಸ್ಪರ ಸಂಬಂಧದ ವ್ಯಾಖ್ಯಾನವನ್ನು ನಿರೂಪಿಸಿ, ಜೀವಿಗಳೊಂದಿಗೆ ಸಸ್ಯ, ಕೀಟ, ಪಕ್ಷಿ, ಜಲಚರ, ಪ್ರಾಣಿ, ಪಂಚಭೂತಗಳ ಸಂಬಂಧವನ್ನು ಅಧ್ಯಯನಕ್ಕೆ ಪರಿಗಣಿಸಬಹುದು. ಜೊತೆಗೆ ಜೀವಿಗಳೊಂದಿಗೆ ಮಾನವನ ವ್ಯಾವಹಾರಿಕ, ಸಾಂಸ್ಕೃತಿಕ, ಸಾಂಪ್ರದಾಯಿಕ, ಧಾರ್ಮಿಕ ಸಂಬಂಧಗಳ ವಿವೇಚನೆಯನ್ನು ನಡೆಸಿ, ಸಂಬಂಧಗಳ ತೌಲನಿಕ ವಿಶ್ಲೇಷಣೆ ಮಾಡಿ, ಸಂಬಂಧಗಳ ತಾತ್ವಿಕ ವಿವೇಚನೆಯೊಂದಿಗೆ ಸ್ಪಷ್ಟ ವ್ಯಾಖ್ಯಾನಕ್ಕೆ ಒಳಪಡಿಸಬಹುದು. 'ಮಾಯಾಲೋಕ' ಮಲೆನಾಡಿನ ಕೃಷಿ ಸಂಬಂಧಿ ಸಣ್ಣ ಸಣ್ಣ ವಿವರಗಳನ್ನು, ವ್ಯಕ್ತಿಗಳ ವಿಶಿಷ್ಟ ಚಹರೆಗಳನ್ನು, ಪರಿಸರದ ಜೀವ ಸಂಕುಲಗಳ ಉಳಿಗಾಲವನ್ನು, ಮನುಷ್ಯನ ಜೀವನಕ್ರಮ, ಅವನ ಹೋರಾಟ ಹಾಗೂ ದೈನಂದಿನ ಬದುಕಿನ ದಿನಚರಿಯ ಸೂಕ್ಷ್ಮಾತಿಸೂಕ್ಷ್ಮಗಳನ್ನು ದಟ್ಟವಾಗಿ ಕಥನರೂಪದಲ್ಲಿ ಕಟ್ಟಿಕೊಡುವ ಸಂಮ್ಮಿಶ್ರಣ ಮಾದರಿಯ ವಿಶಿಷ್ಟ ಕಲಾ ಕೃತಿಯಾಗಿದೆ."[2] ಮಾಯಾಲೋಕ ಕಾದಂಬರಿಯಲ್ಲಿ ತೇಜಸ್ವಿಯವರು ಮನುಷ್ಯ ಲೋಕದ ಸಿಕ್ಕುಗಳ ಜೊತೆಗೆ ಜೀವಜಾಲದ ಜೊತೆಗಿನ ನಂಟನ್ನು ತೆರೆದಿಡುತ್ತಾರೆ. 'ಮಾಯಾಲೋಕ'ದಲ್ಲಿ ಬರುವ ಮತಾಂತರದ ಸನ್ನಿವೇಶ, ಜೂಜಾಟ, ಅವ್ಯವಸ್ಥೆ, ಧರ್ಮದ ಅವನತಿಯ ಜೊತೆಗೆ ಈ ಕೃತಿ ಗ್ರಾಮೀಣ ಭಾರತದ ಪಲ್ಲಟಗಳ ವಿಶ್ವರೂಪ ದರ್ಶನ ಮಾಡಿಸುತ್ತದೆ. ಜಾಗತೀಕರಣದಿಂದ ಜೀವಿಗಳ ಸಂಬಂಧದ ಸ್ವರೂಪದಲ್ಲಿಆದ ಬದಲಾವಣೆಯನ್ನು ಇದು ಚಿತ್ರಿಸುತ್ತದೆ.

"ಪರಿಸರದ ಜೊತೆ ತೇಜಸ್ವಿಯವರು ಅನುಸಂಧಾನ ಮಾಡುತ್ತ ಕಾಣಿಸುತ್ತಿರುವ ಹೊಸ ಜೀವಜಗತ್ತಿನ ದರ್ಶನ.",[3] ಅಂದರೆ ಅಲ್ಲಿ ಕಾಡು

ಹಂದಿ, ಅಳಿಲು, ಹುಂಡುಕೋಳಿ, ಚಿಟ್ಟುಗಿಳಿ, ಮೀನು, ಏಡಿ, ಹಾವು, ಜೇಡ ಹೀಗೆ ತೇಜಸ್ವಿಯವರ ಸಾಹಿತ್ಯದಲ್ಲಿ ಕಾಣುತ್ತಿರುವ ಜೀವಜಗತ್ತು ಅನೇಕ ಅಚ್ಚರಿಗಳನ್ನು ನಮ್ಮ ಮುಂದೆ ಕಟ್ಟಿಕೊಡುವುದರ ಜೊತೆಗೆ ಅವುಗಳ ನಡುವಿನ ಗಟ್ಟಿ ಸಂಬಂಧಗಳನ್ನು ತೋರಿಸುತ್ತವೆ. ಇಂತಹ ಕಥೆಗಳನ್ನು ನಿರೂಪಿಸಲು ತೇಜಸ್ವಿಯವರು ಅನೇಕ ಜ್ಞಾನಶಾಖೆಗಳ ಉಲ್ಲೇಖ ಮಾಡುವುದನ್ನು ಕಾಣಬಹುದು. ಹಾಗಾಗಿ "ಮಾಯಾಲೋಕವನ್ನು ಸಣ್ಣಸಂಗತಿಗಳ ಮಹಾಕಾವ್ಯ ಎನ್ನಬಹುದು."[4] "ಪ್ರಾಣಿ, ಪಕ್ಷಿ, ಕೀಟ, ಗಿಡ ಮರಗಳ ಮೇಲೆ ಬರೆಯುವ ಕಾರಣ, ತೇಜಸ್ವಿಯವರನ್ನು ಪರಿಸರದ ಲೇಖಕ ಎಂದು ಸಾಮಾನ್ಯವಾಗಿ ಗ್ರಹಿಸಲಾಗಿದೆ. ಈಗ ಪ್ರಚಲಿತ ಇರುವ ಅರ್ಥದಲ್ಲಿ ತೇಜಸ್ವಿ ಪರಿಸರವಾದಿಯಲ್ಲ. ಅವರ ಕೃತಿಗಳು ಕಟ್ಟಿಕೊಡುವ ಪರಿಸರದಲ್ಲಿ ಜನ, ಪ್ರಾಣಿ, ಕೀಟ, ಪಕ್ಷಿ, ನದಿ, ಗಿಡ, ಮರ ಎಲ್ಲವೂ ಸೇರಿ ಪರಸ್ಪರ ಸಂಘರ್ಷ ಮತ್ತು ಸಹಬಾಳ್ವೆ ಮಾಡುತ್ತಿರುವ ಹೊಸ ಜೀವಸತ್ಯವೊಂದು ನೆಲೆಸಿದೆ. ಕಾರಂತರ ಜ್ಞಾನಶೋಧ ಹಾಗೂ ಕುವೆಂಪು ಅವರ ಅದ್ವೈತ ಕಲ್ಪನೆಯನ್ನು ತೇಜಸ್ವಿ ವಿಶಿಷ್ಟವಾಗಿ ಸಿಂಥಸೈಜ್ ಮಾಡಿಕೊಂಡರೀತಿಇದು."[5] ತೇಜಸ್ವಿಯವರನ್ನು ಪರಿಸರವಾದಿಯಾಗಿ ನೋಡುವ ಕ್ರಮವನ್ನು ರೂಢಿಸಿಕೊಂಡವರಿಗೆ ಈ ಸಾಲು ಗೊಂದಲಗೊಳಿಸಬಹುದು. ಆದರೆ ತೇಜಸ್ವಿಯವರು ತೋರಿಸುತ್ತಿರುವ ಜೀವಲೋಕದ ಸಂಘರ್ಷ ಮತ್ತು ಸಹಬಾಳ್ವೆ ಪರಿಸರದ ಕುರಿತು ಹೊಸ ಹೊಳವುಗಳನ್ನು ನೀಡುತ್ತಿರುವುದು ಸತ್ಯ. ಅವುಗಳನ್ನು ಗಹನವಾಗಿ ಅಧ್ಯಯನಕ್ಕೆ ಒಳಪಡಿಸಿ ಜೀವಿಲೋಕದ ಸಂಬಂಧಗಳ ಮೌಲ್ಯಮಾಪನ ಮಾಡಿ, ಸ್ಥಿತ್ಯಂತರಗಳನ್ನು ಗುರುತಿಸಬಹುದು.

ಪರಿಸರ ಎನ್ನುವುದು ಜೀವಜಾಲದ ಮಹಾಮನೆ. ಅದೊಂದು ಜೀವ ವೈವಿಧ್ಯತೆಯ ತಾಣ. ಅದರಲ್ಲಿ ಜಲಚರಗಳು, ಭೂಚರಗಳು, ವಾಯುಚರಗಳು ಎಲ್ಲವೂ ಒಳಗೊಂಡು ಅದೊಂದು ಪರಿಪೂರ್ಣ ವ್ಯವಸ್ಥೆಯಾಗಿದೆ. ಪ್ರಾಣಿಗಳು, ಪಕ್ಷಿಗಳು, ಕ್ರಿಮಿಗಳು, ಕೀಟಗಳು, ಸಸ್ಯಗಳು ಮತ್ತು ಮಾನವರು ಈ ನೈಸರ್ಗಿಕ ಪರಿಸರದ ಭಾಗವಾಗಿವೆ. ಈ ಪರಿಸರದ ಭಾಗವಾದ ಜೀವಿಗಳ ಸಂಬಂಧದ ಕಥೆಗಳನ್ನು ತೇಜಸ್ವಿ ಅವರು ಸೂಕ್ಷ್ಮವಾಗಿ ಗಮನಿಸಿ 'ಪರಿಸರದ ಕತೆ'ಯಾಗಿಸಿದ್ದಾರೆ. ಈ ಕಥೆಗಳು ಜೀವವ್ಯವಸ್ಥೆ, ಪರಿಸರದ ಆಗುಹೋಗುಗಳ ಕುರಿತು ಮಾತನಾಡುತ್ತವೆ. ಇಲ್ಲಿ ತೇಜಸ್ವಿ ಮುಖ್ಯವಾಗಿ ಮನುಷ್ಯ–ಮನುಷ್ಯ ಸಂಬಂಧ, ಮನುಷ್ಯ–ಪ್ರಾಣಿಗಳ ಸಂಬಂಧ, ಪ್ರಾಣಿ–ಪ್ರಾಣಿಗಳ ಸಂಬಂಧ, ಮನುಷ್ಯ–ಸಸ್ಯಗಳ ಸಂಬಂಧ, ಪ್ರಾಣಿ–ಸಸ್ಯಗಳ ಸಂಬಂಧದಕುರಿತು ವಿಶಿಷ್ಟ ಶೈಲಿಯಲ್ಲಿ ಗಹನವಾಗಿ ಚರ್ಚಿಸುತ್ತಾರೆ. ಇದು ನಮ್ಮ ಸುತ್ತಲಿನ ಬದುಕು, ಪರಿಸರದಲ್ಲೇ ಇರುವ ಸೂಕ್ಷ್ಮ ವಿವರಗಳನ್ನು ಕಾಣುವ, ಅದರ ಮೂಲಕ ಅರಿವಿನ ಮಿಂಚನ್ನು ತೋರಿಸುವ ಪ್ರಯತ್ನವಾಗಿದೆ.

ಜೀವವ್ಯವಸ್ಥೆಯ ಕೆಲವು ಆಯ್ದ ಪ್ರಾಣಿಗಳನ್ನು ಇಟ್ಟುಕೊಂಡು ತೇಜಸ್ವಿ ಅವರು ಪರಿಸರದ ಕಥೆಯನ್ನು ನಿರೂಪಿಸುತ್ತಾರೆ. ಅತ್ಯಂತ ಸಹಜವಾದ ಹಾಗೂ ಸಂಯಮದಿಂದ ಕೂಡಿದ, ಯಾವುದೇ ಉತ್ಪ್ರೇಕ್ಷೆಗಳಿಲ್ಲದ ಭಾಷೆಯಲ್ಲಿ ಹಾಸ್ಯಭರಿತವಾಗಿ ಮಾಹಿತಿಯನ್ನು, ಹೊಸ ಹೊಳವುಗಳನ್ನು ನಿರುದ್ವಿಗ್ನವಾಗಿ ದಾಟಿಸುತ್ತಾರೆ. 'ಪರಿಸರದಕಥೆ'ಯಲ್ಲಿ ಕಿವಿ ಎಂಬ ನಾಯಿ, ಮಾನೀಟರ್ ಎಂಬ ಉಡ, ನಾನಾ ಜಾತಿಯ ಪಕ್ಷಿಗಳು, ಉರಗಗಳು, ಕಾಡು ಕೋಳಿ, ಮಂಗಗಳು, ಔಷಧೀಯ ಸಸ್ಯಗಳು ಹೀಗೆ ಪರಿಸರದ ಹಲವು ಪಾತ್ರಗಳು ಬಿಚ್ಚಿಕೊಳ್ಳುತ್ತ ಹೋಗುತ್ತವೆ. ತೇಜಸ್ವಿಯವರು ಇಡೀ ಕೃತಿಯಲ್ಲಿ ಇಂಥ ಅನೇಕ ಅಚ್ಚರಿದಾಯಕ, ನಿಗೂಢ ಸಂಬಂಧಗಳ ಕುರಿತು ವಿವರಿಸುತ್ತಾರೆ. ಇಡೀ ಪ್ರಕೃತಿ ಜೀವಿಗಳ ಸಹ ಸಂಬಂಧದತೊಟ್ಟಿಲು. ಅಲ್ಲಿಒಂದುಜೀವಿಯ ನಾಶ, ಇನ್ನೊಂದು ಜೀವಿಯ ನಾಶಕ್ಕೆ ಹಾಗೂ ಒಂದು ಜೀವಿಯ ಉಳಿವು, ಇನ್ನೊಂದು ಜೀವಿಯ ಉಳಿವಿಗೂ ಕಾರಣವಾಗುತ್ತದೆ.

ಅದೇ ರೀತಿ ಒಂದು ಜೀವಿಯ ಹೆಚ್ಚಳ, ಇನ್ನೊಂದು ಜೀವಿಯ ನಾಶಕ್ಕೂ ಕಾರಣವಾಗಬಹುದು.

ಪರಿಸರ ಪ್ರಜ್ಞೆ ಎಂಬುದು ವಾದ, ಹೋರಾಟ, ಅಂಕಿ ಅಂಶಗಳಷ್ಟೇ ಅಲ್ಲ, ಪ್ರಕೃತಿಯೊಡನೆ ಸುಖ–ದುಃಖದ ಸಂವಾದದ ಸಂಬಂಧವು ಹೌದು ಎಂಬುದನ್ನು ಇಲ್ಲಿಯ ಕಥೆಗಳ ಮೂಲಕ ತೇಜಸ್ವಿ ನಿರೂಪಿಸುತ್ತಾರೆ. ತಮ್ಮ ವಿಶಿಷ್ಟ ಶೈಲಿಯ ಮೂಲಕ ತೇಜಸ್ವಿ ಈ ಸಂವಾದ ಮತ್ತು ಸಂಬಂಧಗಳ ನಿರೂಪಣೆಯನ್ನು ಆಪ್ತವಾಗಿಸಿದ್ದಾರೆ ಹಾಗೂ ಜೀವಿಗಳ ಸಂಬಂಧದ ಮಹತ್ವವನ್ನು 'ಪರಿಸರದಕತೆ'ಯ ಮೂಲಕ ಸಾರಿದ್ದಾರೆ. ಕರ್ವಾಲೊ ಕಾದಂಬರಿಯಲ್ಲಿ ಮೂಡಿಗೆರೆಯ ಜೇನು ಸೊಸೈಟಿಯ ಉಲ್ಲೇಖದೊಡನೆ ಪ್ರಾರಂಭವಾಗುವ ಕಥೆ ಹಲವು ಸನ್ನಿವೇಶಗಳ, ಪ್ರಸಂಗಗಳ ಮೂಲಕ ಸಾಗಿ, ನಿರೂಪಕರ ಜೊತೆಗೆ, ವಿಜ್ಞಾನಿ ಕರ್ವಾಲೋ, ಸಹಾಯಕ ಮಂದಣ್ಣ, ನಾಯಿ 'ಕಿವಿ', ಫೋಟೋಗ್ರಾಫರ್ ಪ್ರಭಾಕರ, ಹಾವಾಡಿಗ ಎಂಗ್ಟ, ಬಂಡಿ ಓಡಿಸುವ ಕರಿಯಪ್ಪ ಎಲ್ಲರೂ ಸೇರಿಕೊಂಡು ಹಾರುವ ಓತಿಯನ್ನು ಹಿಂಬಾಲಿಸುವ, ಹಿಡಿಯುವ ಪ್ರಯತ್ನ ಮಾಡುವ ಪ್ರಸಂಗವನ್ನು ವಿವರಿಸುತ್ತದೆ. ಈ ಮಧ್ಯದಲ್ಲಿ ಇಡಿ ಕೃತಿಯಲ್ಲಿ ಮಾನವ ಮತ್ತು ಇತರ ಜೀವಜಗತ್ತಿನ ಸಂಬಂಧಗಳ ಒಳವಿವರಗಳು ಚಿತ್ರಿತಗೊಂಡಿವೆ. ಹಾರುವ ಓತಿಯ ಜೀವನ ವಿಧಾನ, ಎಂಗ್ಟ ಮತ್ತು ಅವನ ಬದುಕು, ಮನುಷ್ಯ ಸಂಬಂಧದ ಸಂಕೀರ್ಣತೆಗಳು ಎಲ್ಲವೂ ಇಲ್ಲಿ ಉಲ್ಲೇಖಿಗೊಂಡಿವೆ.

"ಎಲ್ಲಾ ಜೀವಿಗಳ ಬದುಕು ಮೇಲ್ನೋಟಕ್ಕೆ ಒಂದಕ್ಕೊಂದು ಸಂಬಂಧವಿಲ್ಲದಂತ ಗೋಚರಿಸುತ್ತದೆ. ಆದರೆಸೂಕ್ಷ್ಮವಾಗಿ ಅವಲೋಕಿಸಿದರೆ ಅಲ್ಲಿಕಾಣುವುದು ಏಕಾಂಗಿ ಬದುಕಲ್ಲ. ಜೀವಿಗಳಲ್ಲಿ ಒಂದನ್ನು ಕೊಂದು, ಒಂದುತಿನ್ನುವ ಬಾಳುವೆ ಇರುತ್ತದೆ. ಇಲ್ಲವೇ ಮತ್ತೊಂದರ ಬದುಕಿನಲ್ಲಿ ಪಾಲು ಬೇಡುವ ಪರಾವಲಂಬನೆಯಿರುತ್ತದೆ ಅಥವಾ ಪರಸ್ಪರ ಅವಲಂಬಿಸಿ ಬದುಕುವ ಸಹಬಾಳ್ವೆ ತತ್ವ ಅರಳಿರುತ್ತದೆ. ಈ ಬಗೆಯ ಬದುಕೇಜೀವ ವರ್ತುಲದಕೇಂದ್ರ ಬಿಂದು."[6] ತೇಜಸ್ವಿಯವರು ನಿಸರ್ಗವನ್ನು ನೋಡುವ ಕ್ರಮಕ್ಕೂ ಮತ್ತು ಮಾನವ ಜಗತ್ತನ್ನು ನೋಡುವ ಕ್ರಮಕ್ಕೂ ಭಿನ್ನತೆಗಳಿವೆ. ಅವರು ಮೊದಲು ಮಾನವ ಬದುಕಿನ ನಿಗೂಢಗಳ ಶೋಧನೆಗೆ ಇಳಿದು ನಂತರ ಏಕಾಲಜಿಯ ನಿಗೂಢಗಳನ್ನು ಶೋಧಿಸಲು ಮುಂದಾಗಿದ್ದನ್ನು ನಿಚ್ಚಳವಾಗಿ ಕಾಣಬಹುದು. ತೇಜಸ್ವಿಯವರ ಕಥನಕ್ರಮ ಮೊದಲು 'ಮಾನವ ಕೇಂದ್ರಿತ' ನೆಲೆಯಲ್ಲಿ ರೂಪಗೊಂಡು ನಂತರ ಅದು 'ಜೀವ ಕೇಂದ್ರಿತ' ನೆಲೆಯಲ್ಲಿ ವಿಸ್ತರಣೆ ಪಡೆದುಕೊಂಡಿತು. ಮಾನವ ಮತ್ತು ನಿಸರ್ಗಲೋಕದ ಅವಿನಾಭಾವ ಸಂಬಂಧಗಳನ್ನು ಅವುಗಳ ಎಲ್ಲಾ ಮಗ್ಗಲುಗಳ ಸಮೇತ ಚಿತ್ರಿಸಿ, ಕೆಲವು ಸಮಸ್ಯೆಗಳಿಗೆ ಪರ್ಯಾಯಗಳನ್ನು ಹುಡುಕುವ ಪ್ರಯತ್ನವನ್ನು ನಡೆಸಿದ ತೇಜಸ್ವಿ, ಪರಿಸರದ ನಿಗೂಢಗಳನ್ನು ಅರಿಯುವ ಪ್ರಯತ್ನದಲ್ಲಿ, ಈ ಶೋಧದಲ್ಲಿ ಮಾನವನ ತಿಳುವಳಿಕೆಗೆ ಮಿತಿ ಇರುವುದನ್ನು ಸ್ಪಷ್ಟಪಡಿಸುತ್ತಾರೆ.

**ಜೀವಿಗಳ ನಡುವಿನ ಸಂಬಂಧದ ಅವಸಾನಕ್ಕೆ/ಏರುಪೇರಿಗೆ ಕಾರಣಗಳು :**

ಜೀವಿಗಳ ಸಂಬಂಧ ಎನ್ನುವುದು ತುಂಬಾ ಸೂಕ್ಷ್ಮವೂ, ಜಟಿಲವೂ ಹೌದು. ಒಂದನ್ನು, ಇನ್ನೊಂದು ಅವಲಂಬಿಸಿರುವುದು ಸತ್ಯ. ತೇಜಸ್ವಿಯವರು ಹೇಳುವ ಹಾಗೆ ಕಾಡಿನ ಜೀವಸಂಕುಲದೊಳಗೆ ನಾವು ಕೈ ಹಾಕಿದರೆ, ಅದು ಸಹಾಯಹಸ್ತವಾಗಿದ್ದರೂ, ಅವುಗಳ ನಾಶ ತಪ್ಪಿದ್ದಲ್ಲವೆನ್ನುತ್ತಾರೆ. ಸರ್ಕಾರದ ನೀತಿಗಳಿಂದಾಗಿ, ಕಾಡುಗಳ ಅವಸಾನದಿಂದಾಗಿ, ಪರಿಸರದ ಜೊತೆಗಿನ ಮಾನವನ ಬದುಕಿನ ಸಂಬಂಧ ಸಾಕಷ್ಟು ಬದಲಾವಣೆಯಾಗಿ, ಅದರ ಪರಿಣಾಮಗಳನ್ನು ಇಡೀ ಜೀವಿಲೋಕ ಅನುಭವಿಸುತ್ತಿದೆ. ತೇಜಸ್ವಿ ಉಲ್ಲೇಖಿಸುವಂತೆ, ಮೂಡಿಗೆರೆಯ ಹತ್ತಿರದ ಈಚಲು ಕಾಡಿಗೆ ಪ್ರತಿವರ್ಷ ಬೇಸಿಗೆಯಲ್ಲಿ ಬೆಂಕಿ ಹಾಕಿ

ಪೂರ್ತಿ ಕರಕಲು ಮಾಡುತ್ತಿದ್ದರು, ಮಳೆ ಬಂದ ಸ್ವಲ್ಪದಿನದಲ್ಲಿ ಅದು ಹಸಿರು ಸಾಗರದಂತೆ ದೊಡ್ಡದಾಗಿ ಹಬ್ಬುತಿತ್ತು. ಇದು ಸಸ್ಯ ಮತ್ತು ಮನುಷ್ಯ ಸಂಬಂಧದ ಭಿನ್ನಮುಖವನ್ನು ತೋರಿಸುತ್ತದೆ. ಬೈಶ್ನೋಯಿ ಸಮಾಜದ ಸಂಸ್ಥಾಪಕ ಸಂತ ಜಂಬೋಜಿ ಹೇಳುವಂತೆ, "ನಿಸರ್ಗವು ಯಾವುದೇ ತಪ್ಪನ್ನು ಮಾಡುವುದಿಲ್ಲ. ಆದರೆ ಮಾನವನು ಮಾಡಿದ ತಪ್ಪುಗಳಿಗೆ ಹೆಚ್ಚಿನ ಬಲದಿಂದ ಮಾರುತ್ತರ ನೀಡುತ್ತದೆ."[7] ಜೀವಿಗಳ ನಡುವಿನ ಸಂಬಂಧದ ಅವಸಾನಕ್ಕೆ, ಏರುಪೇರಿಗೆ ಕಾರಣಗಳನ್ನು ನೋಡಿದಾಗ ಪ್ರಮುಖವಾಗಿ ಕಾಣುವ ಅಂಶಗಳು, ಜೀವಿಗಳ ಆವಾಸದ ನಷ್ಟ, ಮಾನವನ ದುರಾಸೆ, ಜೀವಿಗಳ ಆವಾಸದ ಮೇಲಿನ ಅತಿಕ್ರಮಣ, ನೈಸರ್ಗಿಕ ಸಂಪತ್ತಿನ ಲೂಟಿ, ಅವೈಜ್ಞಾನಿಕ ಪದ್ದತಿಗಳ ಅಳವಡಿಕೆ, ಕಾಡುಗಳ ನಾಶ, ಪ್ರಭೇದಗಳ ನಾಶ, ಪರಿಸರ ವಿನಾಶ, ಜಾಗತಿಕ ತಾಪಮಾನದಲ್ಲಿ ಹೆಚ್ಚಳ, ಪ್ರಾಕೃತಿಕ ಅವಘಡಗಳು, ಭೂಸವಕಳಿ, ಇಂಗಾಲದ ಹೊರಸೂಸುವಿಕೆ ಹೀಗೆ ಪಟ್ಟಿ ಮಾಡಬಹುದು.

**ಜೀವಿಗಳ ಸಂಬಂಧಗಳ ಅವಸಾನದ ಪರಿಣಾಮಗಳು**

ತೇಜಸ್ವಿಯವರು "ಕಾಡುಗಳಿಲ್ಲದ, ಕಾಡು ಪ್ರಾಣಿಗಳಲ್ಲದ ಪರಿಸರವು ಸ್ಮಶಾನಕ್ಕಿಂತ ಭೀಕರವಾಗಿ ಕಾಣುತ್ತದೆ"[8] ಎಂದು ಹೇಳುತ್ತಾರೆ. "ಕಾಡುಗಳನ್ನು ನಾಶ ಮಾಡಿದಾಗ ಅಲ್ಲಿರುವ ಪ್ರಾಣಿಗಳನ್ನು, ಅವುಗಳ ಪರಿಸರವನ್ನು ಧ್ವಂಸಮಾಡಿದಾಗ ರಹಸ್ಯ, ಗೌಪ್ಯ, ಅದ್ಭುತಗಳ ನಿರಂತರ ನಿಧಿಯೊಂದನ್ನು ನಮ್ಮ ಕಿರಿಯಜನಾಂಗ ಕಳೆದುಕೊಂಡಂತಾಗಿ ಮನಸ್ಸು ಖಿನ್ನವಾಗುತ್ತದೆ"[9] ಎನ್ನುತ್ತಾರೆ. ತೇಜಸ್ವಿಯವರ ಈ ಮಾತು ಮನುಷ್ಯ ಮತ್ತು ಪರಿಸರದ ನಡುವಿನ ಬಿರುಕು ಬಿಟ್ಟುರುವ ಸಂಬಂಧದ ಸೂಚಕವಾಗಿದೆ. ತಲೆತಲಾಂತರದಿಂದ ಮಾನವ ಪರಿಸರದೊಂದಿಗೆ ಅವಿನಾಭಾವ ಸಂಬಂಧವನ್ನು ಇಟ್ಟುಕೊಂಡು ಬಂದಿದ್ದಾನೆ. ಆದರೆ ಇಂದು ಮಾನವನ ದುರಾಸೆಯಿಂದ ಆ ಸಂಬಂಧ ಛಿದ್ರಗೊಂಡಿದೆ. ಪರಿಸರ ನಾಶವೆಂದರೆ ಅದು ಮಾನವನ ವಿನಾಶವು ಹೌದು. ಪರಿಸರದಿಂದ ಬೇರ್ಪಡಿಸಿ ಮಾನವನನ್ನು ನೋಡಲು ಸಾಧ್ಯವಿಲ್ಲ ಅಥವಾ ಮಾನವ, ಪರಿಸರದ ಸಂಬಂಧವನ್ನು ತ್ಯಜಿಸಿ ಬದುಕಲು ಸಾಧ್ಯವಿಲ್ಲ. ಮಾನವ ಪ್ರಕೃತಿಯ ಶಿಶು ಎಂಬುದನ್ನು ಮರೆತರೆ ಅದು ಅವನ ಅವಸಾನದ ಪ್ರಾರಂಭ.

**ಜೀವಿಗಳ ಸಂಬಂಧ ಗಟ್ಟಿಗೊಳಿಸಲು ಪರಿಹಾರೋಪಾಯಗಳು**

ಸುಸ್ಥಿರ ಅಭಿವೃದ್ಧಿ ಯೋಜನೆಗಳ ಮೂಲಕ ಪರಿಸರ ಸಮತೋಲನ ಕಾಪಾಡಿದಲ್ಲಿ ಜೀವಿಗಳ ನಡುವಿನ ಸಂಬಂಧವನ್ನು ಉಳಿಸಿಕೊಳ್ಳಬಹುದು. ವನಸಂರಕ್ಷಣೆ, ದೈವಿವನಗಳಂತಹ ವ್ಯವಸ್ಥೆಗಳನ್ನು ಉಳಿಸಿಕೊಳ್ಳುವುದು, ಕಾದಿಟ್ಟ ಅರಣ್ಯಗಳು, ಅಭಯಾರಣ್ಯಗಳು, ಸಂರಕ್ಷಿತ ಪ್ರದೇಶಗಳು, ರಾಷ್ಟ್ರೀಯ ಉದ್ಯಾನಗಳು, ಪಕ್ಷಿಧಾಮಗಳನ್ನು ಉಳಿಸಿಕೊಳ್ಳುವುದು. ಶಿಕ್ಷಣ, ಜಾಗೃತಿ, Reduce, Reuse, Recycle ಜಾರಿಗೊಳಿಸುವುದು. ಒಟ್ಟಾರೆ ಜೀವಿಗಳ ಸಂಬಂಧಕ್ಕೆ ಧಕ್ಕೆ ಆಗದಂತೆ ಯೋಜನೆಗಳನ್ನು ಮರುರೂಪಿಸುವುದು, ಜೀವನ ಪದ್ಧತಿಗಳನ್ನು ಬದಲಾಯಿಸಿಕೊಳ್ಳುವುದು ಬಹಳ ಅಗತ್ಯ. ತೇಜಸ್ವಿಯವರ ಸಾಹಿತ್ಯವನ್ನು ಆಮೂಲಾಗ್ರವಾಗಿ ಅಧ್ಯಯನಕ್ಕೆ ಒಳಪಡಿಸಿದಾಗ ಹೊಸ ಸಾಧ್ಯತೆಗಳು ಕಾಣಿಸುತ್ತವೆ. ಆಗ ಹೊಸ ದೃಷ್ಟಿಕೋನದಿಂದ ತೇಜಸ್ವಿಯವರ ಸಾಹಿತ್ಯವನ್ನು ನೋಡಬಹುದು. ಇಂದುಅತ್ಯಂತ ಹೆಚ್ಚು ಪ್ರಚಲಿತವಿರುವ 'ಜೀವಕೇಂದ್ರಿತ' ಮಾದರಿಯ ಕುರಿತು ತೇಜಸ್ವಿಯವರು ಬಹು ಹಿಂದಿಯೆತಮ್ಮ ಸಾಹಿತ್ಯದಲ್ಲಿ ಚರ್ಚಿಸಿರುವುದನ್ನು ಗಮನಿಸಬಹುದು. ಹಾಗಾಗಿ ಪ್ರಕೃತಿಯೊಂದಿಗೆ ಜೀವಿಗಳ ಸಂಬಂಧದಲ್ಲಿಆಗಿರುವ, ಆಗುತ್ತಿರುವ ಅಸಮತೋಲನವನ್ನು ಗ್ರಹಿಸಿ, ಅವುಗಳಿಗೆ ಸೂಕ್ತ ಪರಿಹಾರಗಳನ್ನು ತೇಜಸ್ವಿಯವರ ಸಾಹಿತ್ಯದ ಹಿನ್ನೆಲೆಯಲ್ಲಿ ಕಂಡುಕೊಳ್ಳಬಹುದು.

**ಕೊನೆಟಿಪ್ಪಣಿಗಳು**

1. ಪುಟ್ಟಸ್ವಾಮಿ.ಕೆ ಮತ್ತು ಕೃಪಾಕರ ಸೇನಾನಿ. (2014). *ಜೀವಜಾಲ.* ಅಭಿನವ ಪ್ರಕಾಶನ. ಪುಟ. 49.
2. ಕರೀಗೌಡ ಬೀಚನಹಳ್ಳಿ. (2017). *ಕನ್ನಡ ಸಾಹಿತ್ಯ ಸಂಸ್ಕೃತಿಕಥನ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಪುಟ.279
3. ರಹಮತ್‌ತರೀಕೆರೆ. (2006). *ಕತ್ತಿಯಂಚಿನದಾರಿ.* ಅಭಿನವ ಪ್ರಕಾಶನ. ಪುಟ.52.
4. ಅದೇ, ಪುಟ.59
5. ಅದೇ, ಪುಟ.56
6. ಪುಟ್ಟಸ್ವಾಮಿ.ಕೆ ಮತ್ತು ಕೃಪಾಕರ ಸೇನಾನಿ. (2014). ಪೂರ್ವೋಕ್ತ. ಪುಟ. 48
7. ಹಖ್, ಎಂ.ಎ. *ಜೀವಿ ವೈವಿಧ್ಯ ನಮ್ಮ ಅಮೂಲ್ಯ ಸಂಪತ್ತು.* (ಅನು, ಸಂಕನೂರ, ಎಸ್., ವಿ.ಎನ್.ನಾಯಕ್, ಎಚ್.ಎಸ್.ನಿರಂಜನ ಆರಾಧ್ಯ). ಉದ್ಧೃತ ಭಾಗ. ಪುಟ. 46
8. ಪೂರ್ಣಚಂದ್ರ ತೇಜಸ್ವಿ. ಕೆ.ಪಿ. (2013). *ಪರಿಸರದ ಕತೆ.* ಪುಸ್ತಕ ಪ್ರಕಾಶನ. ಪುಟ.2
9. ಅದೇ. ಪುಟ.2

**ಪರಾಮರ್ಶನ ಗ್ರಂಥಗಳು**


- ಗಂಗಾಧರಯ್ಯ, ಎಸ್.ಎಂ. *ಅಭಿಜಾತ ಕನ್ನಡ.* ದ್ವೈಮಾಸಿಕ ಸಂಶೋಧನಾ ಪತ್ರಿಕೆ. 9 (5).
- ಕರೀಗೌಡ ಬೀಚನಹಳ್ಳಿ. (2017). *ಕನ್ನಡ ಸಾಹಿತ್ಯ ಸಂಸ್ಕೃತಿ ಕಥನ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಕುಶಾಲ ಬರಗೂರು. (2011). *ಪರಿಸರ ಜಿಜ್ಞಾಸೆ,* ಅಭಿರುಚಿ ಪ್ರಕಾಶನ.
- ಪೂರ್ಣಚಂದ್ರ ತೇಜಸ್ವಿ. ಕೆ.ಪಿ. (2017). *ಕರ್ವಾಲೊ.* ಪುಸ್ತಕ ಪ್ರಕಾಶನ.
- ಪೂರ್ಣಚಂದ್ರ ತೇಜಸ್ವಿ. ಕೆ.ಪಿ. (2022). *ಮಾಯಾಲೋಕ.* ಪುಸ್ತಕ ಪ್ರಕಾಶನ.
- ರಹಮತ್ ತರೀಕೆರೆ. (2016). *ಕತ್ತಿಯಂಚಿನ ದಾರಿ.* (ಐದನೇ ಮುದ್ರಣ). ಅಭಿನವ ಪ್ರಕಾಶನ.